# KARNATAKA POWER TRANSMISSION CORPORATION LIMITED

## NOTIFICATION

**No: KPTCL/B16/40360/2016-17** **Date: 10.01.2017**

Sub: Publishing of Final Answer Keys, scores of Online Aptitude Test and 1:2 listing of candidates - Reg.

Ref:
1. Employment Notification No: KPTCL/B16/40360/2016-17 dated: 08.09.2016.
2. Online Aptitude Test Notification No: KPTCL/B16/40360/2016-17 dated 15.12.2016.
3. Challenging of Questions & Answers Keys Notification No: KPTCL/B16/40360/2016-17 dated 27.12.2016.

*******

The Online Aptitude Test for recruitment to the posts of Assistant Executive Engineer (Elec.) and Assistant Engineer (Civil) in KPTCL & ESCOMs was held on **24.12.2016** in various centres across Karnataka.

The Master Questions and Answer Keys of the Online Aptitude Test was uploaded in KPTCL & ESCOMs websites (www.kptcl.com, www.bescom.org, www.cescmysore.org, www.hescom.co.in and www.gescom.in) **on 27.12.2016**. The Candidates were given an opportunity to view the questions and the key answers, as well as challenge any question/answer they might think was incorrect.

The challenges made by the candidates within the stipulated date have been examined and the answer keys finalized. The final answer keys and the scores of the candidates have been uploaded in KPTCL & ESCOMs websites as Annexure-1.

The candidates can view the final answer keys and their scores by logging on to concerned company websites with their Application ID and Date of Birth.

Further, the list of candidates in the ratio of 1:2 for the notified posts for verification of original documents is published in Annexure-2. The cut-off percentage has also been published at Annexure-3.

The candidates may note that, the said list is not a selection list. The date of verification of documents will be notified later.

**Director (Admn. & HR)**
**Corporate Office, KPTCL,**
**Kaveri Bhavan, Bengaluru.**

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಅಧಿಸೂಚನೆ**

**ಸಂಖ್ಯೆ: ಕವಿಪ್ರನಿನಿ/ಬಿ16/40360(IV)/2016-17** **ದಿನಾಂಕ: 10.01.2017**

**ವಿಷಯ** ಅಂತಿಮ ಉತ್ತರಗಳ ಕೀ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಮತ್ತು ಅಭ್ಯರ್ಥಿಗಳ 1:2 ರ ಅನುಪಾತದ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:**
1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17 ದಿನಾಂಕ: 08.09.2016.
2. ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷೆಯ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17 ದಿನಾಂಕ: 15.12.2016
3. ಆನ್ ಲೈನ್ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ/ಉತ್ತರಗಳಿಗೆ ಆಕ್ಷೇಪಿಸುವ ಬಗ್ಗೆ ಹೊರಡಿಸಿದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17 ದಿನಾಂಕ: 27.12.2016.

***

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿವಿಧ ಎಸ್ಕಾಂಗಳಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿದ್ಯುತ್) ಮತ್ತು ಸಹಾಯಕ ಇಂಜಿನಿಯರ್(ಸಿವಿಲ್) ಹುದ್ದೆಗಳ ನೇರ ನೇಮಕಾತಿಗೆ ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷೆಯನ್ನು ದಿನಾಂಕ: 24.12.2016 ರಂದು ರಾಜ್ಯಾದ್ಯಂತ ವಿವಿಧ ಸ್ಥಳಗಳಲ್ಲಿ ನಡೆಸಲಾಗಿರುತ್ತದೆ.

ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಪ್ರಶ್ನೆಗಳು ಮತ್ತು ಉತ್ತರಗಳ ಕೀಗಳನ್ನು (Master answer Keys) ದಿನಾಂಕ: 27.12.2016 ರಂದು www.kptcl.com, www.bescom.org, www.cescmysore.org, www.hescom.co.in, and www.gescom.in ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಲಾಗಿತ್ತು. ಅಭ್ಯರ್ಥಿಗಳಿಗೆ ಪ್ರಶ್ನೆ ಹಾಗೂ ಉತ್ತರಗಳನ್ನು ವೀಕ್ಷಿಸಲು ಹಾಗೂ ಯಾವುದೇ ಪ್ರಶ್ನೆ/ಉತ್ತರಗಳು ತಪ್ಪು ಎಂದು ಕಂಡುಬಂದಲ್ಲಿ, ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿತ್ತು.

ನಿಗಧಿಪಡಿಸಿದ ದಿನಾಂಕ ಮತ್ತು ಸಮಯದೊಳಗೆ ಅಭ್ಯರ್ಥಿಗಳು ಸಲ್ಲಿಸಿದ್ದ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿರುತ್ತದೆ ಮತ್ತು ಉತ್ತರಗಳ ಕೀಗಳನ್ನು ಅಂತಿಮಗೊಳಿಸಲಾಗಿರುತ್ತದೆ. ಅಂತಿಮ ಉತ್ತರಗಳ ಕೀಗಳನ್ನು ಮತ್ತು ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು ಕವಿಪ್ರನಿನಿ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ವೈಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ (ಅನುಬಂಧ-1).

ಅಭ್ಯರ್ಥಿಗಳು ಸಂಬಂಧಿಸಿದ ಕಂಪನಿಯ ವೈಬ್‌ಸೈಟ್‌ನಲ್ಲಿ ತಮ್ಮ ಅರ್ಜಿ ಸಂಖ್ಯೆ ಮತ್ತು ಜನ್ಮದಿನಾಂಕದೊಂದಿಗೆ ಲಾಗ್‌ಆನ್ ಮಾಡುವುದರೊಂದಿಗೆ ತಾವು ಗಳಿಸಿದ ಅಂಕಗಳನ್ನು ವೀಕ್ಷಿಸಬಹುದಾಗಿರುತ್ತದೆ.

ಮುಂದುವರೆದು ಮೂಲ ದಾಖಲಾತಿಗಳನ್ನು ಪರಿಶೀಲಿಸಲು, ಪ್ರಕಟಿಸಿದ ಹುದ್ದೆಗಳಿಗನುಗುಣವಾಗಿ 1:2 ರ ಅನುಪಾತದ ಪಟ್ಟಿಯನ್ನು ಅನುಬಂಧ-2 ರಲ್ಲಿ ಪ್ರಕಟಿಸಲಾಗಿದೆ. ಅನುಬಂಧ-3 ರಲ್ಲಿ ಕಟ್‌ಆಫ್ ಶೇಕಡಾವಾರನ್ನು ಸಹ ಪ್ರಕಟಿಸಲಾಗಿದೆ.

ಸದರಿ 1:2 ರ ಅನುಪಾತದ ಪಟ್ಟಿಯು ಆಯ್ಕೆ ಪಟ್ಟಿಯಾಗಿರುವುದಿಲ್ಲ. ಮೂಲ ದಾಖಲಾತಿಗಳ ಪರಿಶೀಲನೆ ದಿನಾಂಕವನ್ನು ನಂತರದಲ್ಲಿ ಪ್ರಕಟಿಸಲಾಗುವುದು.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು.